ಮುಖ್ಯಮಂತ್ರಿಗಳು ಏನು ಹೇಳುತ್ತಾರೆ. ಅವನ್ನು ದೃಢಭಕ್ತಿಯಿಂದ ನಂಬಿಕೊಂಡಿದ್ದಾರೆ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಅದನ್ನು ಪರಿಶೀಲನೆ ಮಾಡುವುದಕ್ಕೆ ಮಾನ್ಯ ಶಂಕರರಾಯರ ಹಾಗೆ ಅಷ್ಟು ಹೊತ್ತು ಬೇಡ. ಈಗ ೧೯ನೇ ತಾರೀಖಿನೊಳಗೆ ಮನಸ್ಸು ಮಾಡಿದರೆ ಇದರ ಬಗ್ಗೆ ನಿರ್ಧಾರ ಮಾಡುವುದಕ್ಕೆ ಸಾಧ್ಯವಿದೆ. ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ, ಆ ರೀತಿ ಭರವಸೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಆ ರೀತಿ ಮನಸ್ಸು ಮಾಡುವುದಕ್ಕೆ ಏನು ತೊಂದರೆ ಇದೆ ಎಂದು ತಿಳಿಸಲಿ.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—ನಾನು ಈ ಸದನದಲ್ಲಿ ಬುರುಡೆ ಬಿಡುತ್ತಾ ಇಲ್ಲ. ಮಾನ್ಯ ಮಂತ್ರಿಗಳು ಪ್ರತಿ ವರ್ಷ ಸತತವಾಗಿ ಆಶ್ವಾಸನೆ ಕೊಡುತ್ತಾ ಬಂದಿದ್ದಾರೆ. ಪ್ರತಿ ವರ್ಷ ಆಶ್ವಾಸನೆ ಇದ್ದೇ ಇದೆ. ಶಿವದೊಗ್ಗದಲ್ಲಿ ವಿಶ್ವವಿದ್ಯಾನಿಲಯ ಮಾಡುವುದಕ್ಕೆ ಏನು ಕಷ್ಟವಿದೆ. ಅಲ್ಲಿ ಇಂಜಿನಿಯರಿಂಗ್ ಕಾಲೇಜು ಇದೆ, ಪ್ರತಿಯೊಂದೂ ಕಾಲೇಜು ಇದೆ. ವಿಶ್ವವಿದ್ಯಾನಿಲಯ ಎಂದು ನಾಮಕರಣ ಮಾಡುವುದಷ್ಟೇ ನಿಮ್ಮಿಂದ ಆಗಬೇಕಾದುದು ; ಹೊಸದಾಗಿ ತೆಗೆಯಬೇಕಾದುದಿಲ್ಲ. ಆದುದರಿಂದ ದೊಡ್ಡ ಮನಸ್ಸು ಮಾಡಿ ೧೯ನೇ ತಾರೀಖಿನ ರಾಜ್ಯದ ಸಂಪುಟ ಸಭೆಯಲ್ಲಿ ಅನೌನ್ಸ್ ಮಾಡುತ್ತೀರಾ ?

ಶ್ರೀ ಜಿ.ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೆ, ಶಿಕ್ಷಣ ಕ್ಷೇತ್ರ ಬೆಳೆದಹಾಗೆ, ಮಹಾ ವಿದ್ಯಾಲಯಗಳು ಬೆಳೆದಹಾಗೆ ನಾವು ಇಂತಹ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಲಿಕ್ಕೆ ಅಡ್ಡಿ ಇಲ್ಲ ಎಂಬ ಮಾತನ್ನು ಸ್ಪಷ್ಟಪಡಿಸುತ್ತೇನೆ. But at the same time we have to look into other academic aspects, number of colleges in that region *etc.*, plus. We have to look into the financial position of the Government also. ನಾವು ಗುಲ್ಬರ್ಗ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡುವಾಗ ನಮಗೆ ಇದ್ದಂಥ ಪರಿಸ್ಥಿತಿಯಲ್ಲಿ ನಾವು ಪ್ರತಿಯೊಂದು ವಿಶ್ವವಿದ್ಯಾನಿಲಯಕ್ಕೆ ಒಂದೊಂದು ಕೋಟಿ ಖರ್ಚು ಮಾಡತಕ್ಕಂಥ ಸಂದರ್ಭವಿದ್ದಾಗ ಳ ಕೋಟಿವರೆಗೆ ಮುಟ್ಟಲಿಲ್ಲ. ಇನ್ನು ಅಭಿವೃದ್ಧಿ ಪಡಿಸಬೇಕಾದರೆ ಕೋಟ್ಯಾಂತರ ರೂಪಾಯಿಗಳ ದುಡ್ಡು ಬೇಕಾಗುತ್ತದೆ. ಇದಾದಮೇಲೆ ಯು.ಬಿ.ಸಿ. ಸಹಾಯ ಮಾಡುತ್ತದೆ. ನಾವು ಯು.ಬಿ ಸಿ. ಯನ್ನು ಕೇಳಬೇಕಾಗುತ್ತದೆ, ನಾವು ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳಬೇಕಾಗುತ್ತದೆ. ಆದುದರಿಂದ ನಾವು ಇದರ ಬಗ್ಗೆ ಸದ್ಯಕ್ಕೆ ಆಲೋಚನೆ ಮಾಡಿಲ್ಲ. ಮುಂದೆ ಹಣಕಾಸಿನ ಪರಿಸ್ಥಿತಿಯನ್ನು ನೋಡೋಣ.

## Vehicles Ply Jaily on Kalburgi-jadapura Road in Afzalpur Taluk

704 SRI M. Y. PATIL (Afzalpur).—Will the Minister for Public Works be pleased to state.—

(a)whether it has come to the notice of Government the number of vehicles ply daily on Kalburgi-Jadapura Road in Afzalpur Taluk ;

(b) whether it is a fact, that the dimension of Kalburgi-Jadapur Road is not fit for vehicular traffic ;

(c) if so, action taken to complete the same as tar road during this year ?

SRI KAGODU THIMMAPPA (Minister for Public Works).—

(a) Yes. Daily 171 vehicles-ply on this road (based on the enumeration conducted on 21-1-1981). The width of this Road is 24 Feet and its length is 33.50 K. M.

(b) No This road is fit for vehicular traffic.

(c) Out of the total length of 33.5 Kms. length has already been made as Tar Road. It is proposed to make tar Road for 6 Kms. length during the current year. The question of making the remaining portion of the Road as Tar Road, depends on the financial position during the ensuing years.

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಆಫ್ಜಲ್ಪುರ ತಾಲ್ಲೂಕಿನ ಗುಲ್ಬರ್ಗ-ಜಾದಾಪುರ ರಸ್ತೆಯ ಮೇಲೆ ಪ್ರತಿ ದಿವಸ ೧೭೧ ವಾಹನಗಳು ತಿರುಗಾಡುತ್ತವೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಆದರೆ ಸುಮಾರು ೩೩ ಕಿಲೋಮೀಟರ್ ಉದ್ದ ಇರುವ ಈ ರಸ್ತೆ ತಾಲ್ಲೂಕು ಹೆಡ್ ಕ್ವಾರ್ಟರ್‌ನಿಂದ ಜಿಲ್ಲೆಗೆ ಮುಟ್ಟುವಂಥ ರಸ್ತೆಯಾಗಿದೆ. ಇದು ಕನಿಷ್ಟಪಕ್ಷ ಡಾಂಬರೀ ರಸ್ತೆ ಯಾದರೂ ಆಗಬೇಕು. ನಮಗೆ ಸ್ವಾತಂತ್ರ್ಯ ಸಿಕ್ಕಿ ಇಷ್ಟು ವರ್ಷಗಳಾದರೂ ಕೂಡ.....

ಅಧ್ಯಕ್ಷರು.— ಕತೆ ಹೇಳಬೇಡಿ, ಪ್ರಶ್ನೆ ಕೇಳಿ.

ಶ್ರೀ ಎಂ. ವೈ. ಪಾಟೀಲ್.—ಕಳೆದ ೧೦ ವರ್ಷಗಳಲ್ಲಿ ೯ ಕೀಲೋಮೀಟರ್ ಅಷ್ಟೇ ಡಾಂಬರು ರಸ್ತೆಯಾಗಿದೆ. ಅದುದರಿಂದ ಇನ್ನುಳಿದ ರಸ್ತೆಯನ್ನು ಯಾವಾಗ ಮಾಡುತ್ತೀರಾ ಎಂದು ಹೇಳಬೇಕು ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ, ಈ ವರ್ಷ ಮತ್ತೆ ೬ ಕಿಲೋಮೀಟರ್ ರಸ್ತೆಗೆ ಟಾರ್ ಹಾಕಬೇಕು ಎಂದು ಟೆಂಡರ್ ಕರೆದಿದ್ದೇವೆ, ಯಾರೂ ಬರಲಿಲ್ಲ. ಈಗ ಇಲಾಖೆ ಮುಖಾಂತರ ಮಾಡಬೇಕು ಎಂದು ಮಾಡಿದ್ದೇವೆ. ಉಳಿದಿರತಕ್ಕ ರಸ್ತೆಯನ್ನು ಹಂತ ಹಂತವಾಗಿ ಹಣಕಾಸನ್ನು ಒದಗಿಸಿಕೊಂಡು ಮಾಡುತ್ತೇವೆ.

ಶ್ರೀ ಎಂ. ವೈ. ಪಾಟೀಲ್.—ತಾಲ್ಲೂಕು ಹೆಡ್ ಕ್ವಾರ್ಟರ್‌ನಿಂದ ಗುಲ್ಬರ್ಗ ಜಿಲ್ಲಾ ಹೆಡ್ ಕ್ವಾರ್ಟರ್‌ಗೆ ಬರಬೇಕಾದರೆ ಇರುವುದು ಇದು ಒಂದೇ ರಸ್ತೆ. ಈ ಮಾರ್ಗವಾಗಿ ೧೭೧ ವಾಹನಗಳು ಓಡಾಡುತ್ತವೆ, ಜನರಿಗೆ ತೊಂದರೆಯಾಗಿದೆ. ಮತ್ತು ಕೆ.ಎಸ್.ಆರ್.ಟಿ.ಸಿ. ಡಿಪಾರ್ಟ್‌ಮೆಂಟ್‌ನವರೂ ಕೂಡ ಬೇಜಾರಾಗಿದ್ದಾರೆ. ದಯವಿಟ್ಟು ಉಳಿದಂಥ ರಸ್ತೆಯನ್ನು ಇದೇ ವರ್ಷ ಪೂರ್ತ ಮಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಈ ಸಾರಿ ಮಾನ್ಯ ಸದಸ್ಯರ ಸಲಹೆ ಮೇರೆಗೆ ಕೆಲವು ರಸ್ತೆಗಳನ್ನು ತೆಗೆದುಕೊಳ್ಳಬೇಕು ಎಂದು ಮಾಡಿದ್ದೇವೆ. ಕೆಲವು ರಸ್ತೆಗಳನ್ನು ಸೂಚನೆ ಮಾಡಿದ್ದಾರೆ. ಅದರಲ್ಲಿ ಇದೇ ರಸ್ತೆಯನ್ನು ಸೂಚನೆ ಮಾಡಿದ್ದರೆ ತೆಗೆದುಕೊಳ್ಳುತ್ತೇವೆ.

**Relief measures to the farmers**

797 SRI S. R. BOMMAI (Hubli Rural).—Will the Chief Minister be pleased to state.—

(a) the Financial benefit involved in the reliefs announced by the Chief Minister to the farmers of the State after this Government assuming office on 12th January 1980 uptill now ;

(b) the amount involved in each of the benefits or reliefs given to the farmers ;

(c) the total enhanced amount accured to the Government from the farmxrs by the increase of the water rate by an order dated 27th December 1980 ?